ದನ್ನು ಕೇಳುವುದೇ ಈ ಪ್ರಶ್ನೆಯ ಉದ್ದೇಶ. ಇದಕ್ಕೆ ಹೆಚ್ಚು ವಿವರಗಳನ್ನು ತರಿಸಿಕೊಂಡು ಮುಂದೆ ಈ ಪ್ರಶ್ನೆಯನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿ ಕೊಟ್ಟರೆ ಒಳ್ಳೆಯದು.

ಶ್ರೀ ಕಡಿದಾಳ್ ಮಂಜಪ್ಪ.—ಆ ವಿಚಾರದಲ್ಲಿ ಬೇಕಾದರೆ ಸರ್ಕಾರದವರು ವಿಚಾರ ಮಾಡುತ್ತಾರೆ. ಇಷ್ಟೇ ವಿವರ ಸಿಕ್ಕುವುದು ಎಂದು ಹೇಳಿ ಇವೊತ್ತು ಬೆಳಿಗ್ಗೆ ರೆವಿನ್ಯೂ ಕಮಿಷನರು ಹೇಳಿದರು. ಇನ್ನು ಹೆಚ್ಚು ವಿವರ ಸಿಕ್ಕುವುದಿಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಅಣೆಕಟ್ಟಿನ ಮೇಲ್ ಭಾಗದ ಜಮೀನು, ಕೆಳ ಭಾಗದ ಜಮೀನು ಎಂದರೆ ಏನು, ಯಾವ ರೀತಿಯಲ್ಲಿ?

ಶ್ರೀ ಕಡಿದಾಳ್ ಮಂಜಪ್ಪ.—ಅಣೆ ಹತ್ತಿರದಲ್ಲಿ ಎಂದು.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಕೆಳ ಭಾಗದ ಜಮೀನು ಎಂದರೆ ಮುಳುಗಡೆಯಾದ ಪ್ರದೇಶ ಎಂದು ಅರ್ಥವಾಗುವುದಿಲ್ಲವೇ.

(*No answer*).

Land Improvement Loans.

Q.—348. **Sri D. R. KARI GOWDA** (Hassan).—

Will the Government be pleased to state :—

(*a*) the Budget allotment for the year 1954-55 for Land Improvement loans and Takavi loans ;

(*b*) out of this allotment, how much amount is spent during this year (districtwar information may be furnished) ?

A.—**Sri Kadidal MANJAPPA** (Minister for Revenue and Public Works).—

(*a*) *L. I. Loan.* Rs. 2,62,500 — *Takavi Loan.* Rs. 5,25,000

(*b*) Amount spent during the year up to the end of January 1955.

	District.		*L. I. Loan.* Rs.	*Takavi Loan.* Rs.
1	Bangalore	...	19,600	25,900
2	Kolar	...	21,500	38'500
3	Tumkur	...	17,850	22,950
4	Mysore	...	23,612	38,850
5	Mandya	...	6,925	29,800
6	Hassan	...	11,275	33,250
7	Shimoga	...	9,750	34,425
8	Chickmagalur	...	6,275	26,250
9	Chitaldrug	...	21,835	41,275
10	Bellary	...	19,500	37,000

ಶ್ರೀ ಡಿ. ಆರ್. ಕರಿಗೌಡ.—ಅಬಾದು ಸಾಲ 2,65,500 ರೂಪಾಯಿಗಳು ಒದಗಿಸಿರುವುದರಲ್ಲಿ ಒಂದು ಲಕ್ಷ ಚಿಲ್ಲರೆ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದೀರಿ. ಇದಕ್ಕಾಗಿ ಹೆಚ್ಚು ದರಖಾಸ್ತುಗಳಿರಲಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಇನ್ನೂ ಎರಡು ತಿಂಗಳು ಇದೆ.

ಶ್ರೀ ಡಿ. ಆರ್. ಕರಿಗೌಡ.—ಆಮೇಲೆ 5,25,000 ರೂಪಾಯಿಗಳು ತಕಾವಿ ಸಾಲಕ್ಕಾಗಿ ಒದಗಿಸುವುದರಲ್ಲಿ ಮೂರು ಲಕ್ಷ ರೂಪಾಯಿಗಳು ಮಾತ್ರ ಖರ್ಚಾಗಿವೆ. ಅಮಲ್ದಾರರೂ ಸಬ್ ಡಿವಿಜ್ಞ ಆಫೀಸರೂ ಸಾಲ ಮಂಜೂರುಮಾಡಿದರೆ ಅದು ವಸೂಲಾಗುವಾಗ ಸರಿಯಾಗಿ ವಸೂಲಾಗದಿದ್ದರೆ ತಮ್ಮ ಪರ್ಷನಲ್ಲಿ ಅಥವಾ ಸಂಬಳದಲ್ಲಿ ಹಿಡಿಯುತ್ತಾರೆ ಎಂದು ಹೇಳಿ ಅವರು ಹಣ ವಿಲೇವಾರಿ ಮಾಡುತ್ತಿಲ್ಲ ಅಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ರೂಲ್ಸ್‌ಗನುಸಾರವಾಗಿ ಅವರು ಸಾಲದ ಪೊಬಲಗನ್ನು ವಿಲೇವಾರಿ ಮಾಡುತ್ತಾರೆ.

ಶ್ರೀ ಡಿ. ಆರ್. ಕರಿಗೌಡ.—ಸಾಲ ತೆಗೆದು ಕೊಂಡವರು ವಾಪಸು ಕೊಡದಿದ್ದರೆ, ಆ ಹಣವನ್ನು ಯಾವ ಅಧಿಕಾರಿಗಳು ಮಂಜೂರು ಮಾಡುತ್ತಾರೋ ಅವರ ಸಂಬಳದಲ್ಲಿ ಅಥವಾ ಅವರು ರಿಟೈರ್ ಆಗಿದ್ದರೆ ಅವರ ಪರ್ಷನಲ್ಲಿ ಹಿಡಿದು ವಸೂಲುಮಾಡಬೇಕೆಂದು ಸರ್ಕಾರಿ ಆರ್ಡರ್ ಇಲ್ಲವೇ?

ಶ್ರೀ ಕೆ. ಹನುಮಂತಯ್ಯ.—ಆ ರೀತಿ ರೂಲ್ಸು ಬಹಳ ಕಾಲದಿಂದ ಇದೆ. ಹಿಂದೆ ಆ ರೀತಿ ಸಾಲ ಕೊಡುವಾಗ ತಮಗೆ ಬೇಕಾದವರಿಗೆ ಕೊಟ್ಟುಕೊಳ್ಳುತ್ತಾರೆ, ಅದು ವಸೂಲಾಗುವುದಿಲ್ಲ ಎಂದು ಅಪಾದನೆ ಬಂದಮೇಲೆ, ಸಾಲ ವಾಪಸು ಬರುವಂತೆ ಮಾಡುವುದ ಕ್ಕೋಸ್ಕರ ಸಾಲ ಮಂಜೂರು ಮಾಡತಕ್ಕ ಅಧಿಕಾರಿಗಳ ಸ್ವಂತ ಜವಾಬ್ದಾರಿ ಇರಬೇಕು ಎಂದು ರೂಲ್ಸ್ ಮಾಡಿದರು. ಈಗಲೂ ಆ ರೂಲ್ಸ್‌ಗನುಸಾರವಾಗಿ ಕೆಲಸ ನಡೆಯುತ್ತಾ ಇದೆ.

ಶ್ರೀ ಡಿ. ಆರ್. ಕರಿಗೌಡ.—ಈ ರೂಲ್ಸನ್ನು ಬದಲಾವಣೆ ಮಾಡತಕ್ಕ ಕಾಲ ಈಗ ಬಂದಿಲ್ಲವೇ?

ಶ್ರೀ ಕೆ. ಹನುಮಂತಯ್ಯ.—ಬದಲಾವಣೆ ಮಾಡ ಬೇಕೇ ಎಂಬುದನ್ನು ಯೋಚನೆ ಮಾಡಬೇಕು. ಈ ರೀತಿ ನಿರ್ಬಂಧ ಇಲ್ಲದೇ ಇದ್ದರೆ ಸಾಲ ಏನೂ ವಸೂಲಾಗುವುದಿಲ್ಲ.

ಶ್ರೀ ಡಿ. ಆರ್. ಕರಿಗೌಡ.—ಪರ್ಷನ್ ಆದಮೇಲೂ ಅವರು ಆ ತಪ್ಪಿಗೆ ಗುರಿಯಾಗಬೇಕೇ?

ಶ್ರೀ ಕೆ. ಹನುಮಂತಯ್ಯ.—ಯೋಚನೆ ಮಾಡೋಣ.

ಶ್ರೀ ಡಿ. ಆರ್. ಕರಿಗೌಡ.—ಎಲ್ಲಾ ಡಿಸ್ಟ್ರಿಕ್ಟ್ ಗಳಲ್ಲೂ ಸೆಂಟ್ರಲ್‌ಬ್ಯಾಂಕುಗಳನ್ನು ಪ್ರಾರಂಭಮಾಡು ವುದರಿಂದ ಈ ಸಾಲಗಳನ್ನು ಆಯಾ ಸಹಕಾರ ಸಂಘಗಳ ಮೂಲಕ ಕೊಡುವುದು ನೂಕ್ತವಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಯೋಚನೆ ಮಾಡು ತ್ತೇವೆ.

ಶ್ರೀ ಡಿ. ಆರ್. ಕರಿಗೌಡ.—ಇದನ್ನು ಕಳೆದ 2-3 ವರ್ಷಗಳಿಂದಲೂ ಹೇಳುತ್ತಾ ಇಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ನನಗೆ ನೆನಪಿಲ್ಲ.